بِسۡمِ اللّٰہِ الرَّحۡمٰنِ الرَّحِیۡمِ
In the name of Allah the Most Gracious the Ever Merciful

Press Desk
Ahmadiyya Muslim Jamaʻat
INTERNATIONAL
(INDIA)
A Registered Religious and Charitable Society in India under the Societies Registration Act XXI 1860

# PRESS RELEASE

Dated: May 06,2015

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನೇತಾರರ

## IAAAE (International Association of Ahmadi Architects and Engineers)ಯ

## ವಾರ್ಷಿಕ ವಿಚಾರಗೋಷ್ಠಿಯಲ್ಲಿ ಸಮಾರೋಪ ಭಾಷಣ




“ಮನುಷ್ಯ ಸೇವೆ ಇಸ್ಲಾಮಿಕ ವಿಶ್ವಾಸಗಳ ಮುಖ್ಯವಾದೊಂದು ಭಾಗವಾಗಿದೆ” ಎಂದು ಅಹ್ಮದಿಯಾ ಜಮಾಅತಿನ ಜಾಗತಿಕ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಹೇಳಿದರು.

ಮೇ 02, 2015ರಂದು ಜಾಗತಿಕ ಅಹ್ಮದಿಯಾ ಜಮಾಅತಿನ ಐದನೆಯ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು International Association of Ahmadi Architects and Engineers (IAAAE)ರ ಯೂರೋಪಿಯನ್ ಚಾಪ್ಟರ್‌ನ ವಾರ್ಷಿಕ ಸಿಂಪೋಸಿಯಮ್‌ನಲ್ಲಿ ತಮ್ಮ ಭಾಷಣ ನೀಡಿದರು. ಈ ವಿಚಾರಗೋಷ್ಠಿ ಮಸ್ಜಿದ್ ಬೈತುಲ್ ಫುತೂಹ್ ಲಂಡನ್‌ನಲ್ಲಿ ಜರುಗಿತು.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಹೇಳಿದರು :

**"ಅಹ್ಮದಿಯಾ ಮುಸ್ಲಿಮ್ ಜಮಾಅತ್ ಕ್ಷೇಮಪರ ಕೆಲಸಗಳನ್ನು ನಿಷ್ಠೆಯಿಂದ ಮತ್ತು ಯಾವುದೇ ಲೌಕಿಕ ಉದ್ದೇಶವಿಲ್ಲದೆ ಮಾಡುತ್ತದೆ. ಅಹ್ಮದಿಯಾ ಜಮಾಅತ್ ಇತರರನ್ನು ಸಹಾಯ ಮಾಡುವುದು ಒಂದು ಮೂಲಭೂತ ನೈತಿಕ ಕರ್ತವ್ಯವಾದ ಕಾರಣದಿಂದ ಮಾತ್ರವಲ್ಲ, ಬದಲಾಗಿ ಮುಸ್ಲಿಮ್ ಎಂಬ ನೆಲೆಯಲ್ಲಿ ಮನುಷ್ಯರ ಸೇವೆ ನಮ್ಮ ವಿಶ್ವಾಸದ ಒಂದು ಮುಖ್ಯ ಭಾಗವಾಗಿದೆ ಎಂಬ ಕಾರಣದಿಂದ ಸಹ ಆಗಿದೆ."**




ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಹೇಳಿದರು :

**"ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹಲವು ಬಾರಿ ಯಥಾರ್ಥ ಸತ್ಯವಿಶ್ವಾಸಿಯನ್ನು ಮಾನವ ಹಕ್ಕುಗಳನ್ನು ಈಡೇರಿಸಲು ಮತ್ತು ದರಿದ್ರರನ್ನು ಮತ್ತು ದುಃಖಿತರನ್ನು ಸಹಾಯ ಮಾಡಲು ಉಪದೇಶಿಸಿದೆ. ಸಮಾಜದ ಹಿಂದುಳಿದ ವರ್ಗದವರ (ಬಡವರ, ನಿರ್ಗತಿಕರ ಮತ್ತು ಅನಾಥರ) ಸೇವೆ ಮಾಡಲು ಪವಿತ್ರ ಖುರ್‌ಆನ್ ವಿಶೇಷವಾದ ಒತ್ತು ನೀಡಿದೆ."**



ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ಅತುಲ್ಯವಾದ ಮನುಷ್ಯ ಸೇವೆಯ ಉದಾಹರಣೆ ನೀಡುತ್ತಾ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಹೇಳಿದರು :

**"ಮಾನವ ಹಕ್ಕುಗಳ ಈಡೇರಿಸುವಿಕೆ ಆವಶ್ಯಕವೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರು ಹಲವು ಬಾರಿ ತಾಕೀತು ಮಾಡಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರು ಸಾಧ್ಯವಾದ ಎಲ್ಲ ರೀತಿಯಲ್ಲಿ ಮನುಷ್ಯ ಸೇವೆ ಮಾಡುತ್ತಿದ್ದರು ಮತ್ತು ಇತರರಿಗೆ ಸುಖ– ಸೌಲಭ್ಯ ಒದಗಿಸಲು ತಮ್ಮ ಸುಖವನ್ನು ತ್ಯಾಗ ಮಾಡುತ್ತಿದ್ದರು ಎಂದು ಅವರ ಅನುಗ್ರಹೀತ ಜೀವಿತ ಮಾದರಿಯಿಂದ ಕಾಣಬಹುದು. ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರು ಹೇಳಿದರು: "ಈಮಾನ್ (ವಿಶ್ವಾಸ)ನ ಅರ್ಥವೇ ಇತರರಿಗೆ ಒಳಿತನ್ನು ಆಗ್ರಹಿಸುವುದು, ಇತರರಿಗೆ ಪ್ರಾಮಾಣಿಕವಾಗಿರುವುದು ಮತ್ತು ಅವರ ಹಕ್ಕುಗಳನ್ನು ಈಡೇರಿಸುವುದಾಗಿದೆ."**

ಹಿಂದುಳಿದ ರಾಷ್ಟ್ರಗಳ ವಿವಿಧ ಪ್ರದೇಶಗಳಲ್ಲಿ IAAAE ಮಾಡಿದ ಯಶಸ್ವಿ ಹೆಜ್ಜೆಗಳನ್ನು ಉಲ್ಲೇಖಿಸುತ್ತಾ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಹೇಳಿದರು :

**"ಅಲ್ಲಾಹನ ಅನುಗ್ರಹದಿಂದ IAAAE ನಿರ್ಗತಿಕರ ದುಃಖಗಳನ್ನು ದೂರಮಾಡಲು ಮತ್ತು ಅವರಿಗೆ ಸವಲತ್ತುಗಳನ್ನು ಒದಗಿಸಲು ಹಲವು ಯೋಜನೆಗಳನ್ನು ಮಾಡಿದೆ. ಉದಾಹರಣೆಗೆ ಅದು ಜನರಿಗೆ ನೀರು ಒದಗಿಸಲು ಸಾವಿರಾರು ಪಾಲು ಬಿದ್ದ ಬಾವಿಗಳಲ್ಲಿ ನೀರು ಬರಿಸುವ ಯಶಸ್ವಿ ಪ್ರಯೋಗ ಮಾಡಿದೆ. Model Village Project ನ ಅಧೀನದಲ್ಲಿ ಅದು ಹಿಂದುಳಿದ ರಾಷ್ಟ್ರಗಳಲ್ಲಿ ನೆಲೆಸಿರುವ ನಿರ್ಗತಿಕರಿಗೆ ವಸತಿ ಗೃಹಗಳನ್ನು ಮತ್ತು ಉಪಜೀವನದ ಸೌಕರ್ಯಗಳನ್ನು ಒದಗಿಸಿದೆ."**

ಅವರು ಹೇಳಿದರು :

**"ಇತರರಿಗೆ ಸುಖ–ಸೌಲಭ್ಯಗಳನ್ನು ಒದಗಿಸುವ ಕ್ಷೇತ್ರದಲ್ಲಿ ನೀವು ಸೇವೆ ಮಾಡುತ್ತಿರುವುದರಿಂದ ನೀವು ಭಾಗ್ಯವಂತರು ಎಂಬುವುದನ್ನು ಯಾವಾಗಲೂ ನೆನಪಿಡಿರಿ ಮತ್ತು ಅದರ ನೈಜತೆಯನ್ನು ತಿಳಿಯಿರಿ. ಇಂತಹ ಅರ್ಪಣಾ ಮನೋಭಾವದಿಂದ ಕೆಲಸ ಮಾಡುವವರಿಗೆ ಅಲ್ಲಾಹನು ಪರಲೋಕದಲ್ಲಿ ಸುಖ–ಸೌಲಭ್ಯಗಳನ್ನು ಒದಗಿಸುವನು ಎಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ."**

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ತಮ್ಮ ಭಾಷನದ ಕೊನೆಯಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರ ಒಂದು ಉಲ್ಲೇಖವನ್ನು ಮುಂದಿಟ್ಟರು :

**"ಪ್ರತಿಯೊಂದು ವ್ಯಕ್ತಿಯೊಂದಿಗೆ ಸ್ನೇಹ ಮತ್ತು ಸಹಾನುಭೂತಿಯಿಂದ ಇರುವುದು ಆರಾಧನೆಯ ಒಂದು ಮಹತ್ತಾದ ರೀತಿಯಾಗಿದೆ. ಇದು ಅಲ್ಲಾಹನ ಸಂತೃಪ್ತಿ ಗಳಿಸಲು ಉತ್ತಮವಾದ ಮಾರ್ಗವಾಗಿದೆ."**

ಈ ಸಮಾರಂಭದ ಆರಂಭದಲ್ಲಿ IAAAE Aಯ ಯೂರೋಪಿಯನ್ ಚಾಪ್ಟರ್‌ನ ಚೇರ್‌ಮ್ಯಾನ್ ಬಹುಮಾನ್ಯ ಮುಹಮ್ಮದ್ ಅಕ್‌ರಮ್ ಅಹ್ಮದಿ ಸಾಹಿಬರು ರಿಪೋರ್ಟ್ ಸಮರ್ಪಿಸಿದರು. ಅವರು ಅದರಲ್ಲಿ IAAAE ಈ ವರ್ಷ ಮಾಡಿದ ಮುಖ್ಯ ಕೆಲಸಗಳ ಮತ್ತು ಯೋಜನೆಗಳ ಬಗ್ಗೆ ಪ್ರಸ್ತಾಪಿಸಿದರು. ಅವರು ಹೇಳಿದರು: "Ebola Virus ಹರಡಿರುವ ಕಾರಣ ಪಶ್ಚಿಮ ಆಫ್ರಿಕದ ಕೆಲವು ಯೋಜನೆಗಳು ಮುಂದೂಡಲ್ಪಟ್ಟಿದೆ. ಅದೇ ವೇಳೆ ಮಧ್ಯ ಆಫ್ರಿಕ ಮತ್ತು ಪೂರ್ವ ಆಫ್ರಿಕದಲ್ಲಿ ಕ್ಷಿಪ್ರ ಗತಿಯಲ್ಲಿ ನಿರಂತರ ಕ್ಷೇಮಪರ ಕೆಲಸಗಳ ಯೋಜನೆಗಳು ಜಾರಿಯಲ್ಲಿದೆ. ಆಫ್ರಿಕ ಮತ್ತು ಯೂರೋಪ್‌ನಲ್ಲಿ ವಿವಿಧ ಮಸೀದಿ

ಮತ್ತು ಮಿಶನ್ ಹೌಸ್‌ಗಳ ನಿರ್ಮಾಣ ಹಾಗೂ ವಿಸ್ತರಣೆಗೆ ಸಂಬಂಧಪಟ್ಟ ಕೆಲಸಗಳು ಸಹ IAAAE ಮಾಡುತ್ತಿದೆ."




ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರ ದುಆದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಯೂರೋಪಿಯನ್ ರಾಷ್ಟ್ರಗಳಿಂದ 120 ಪ್ರತಿನಿಧಿಗಳು ಈ ಸಿಂಪೋಸಿಯಮ್‌ನಲ್ಲಿ ಭಾಗವಹಿಸಿದರು.

**<u>END RELEASE</u>**

For further details please contact:
Incharge Press & Media, Ahmadiyya Muslim Jama'at India,
Qadian-143516, Distt.Gurdaspur, Punjab, India.
Mobile: +91-99887 57988, Email: pressamjindia@gmail.com,
Tel: +91-1872-500311, Fax: +91-1872-500178
Noorul Islam Toll Free Number: 1800-3010-2131